# ಮಚ್ಚೆ ನಟಿಯ ಮನ್ವಂತರ

ಬಲಗೆನ್ನೆ ಮೇಲಿನ ಆಕರ್ಷಕ ಮಚ್ಚೆಯನ್ನು ಮೇಕಪ್ ಮುಚ್ಚಿತ್ತು. 'ಅರೆ, ಅಲ್ಲಿದ್ದ ಕಪ್ಪು ಚುಕ್ಕೆ ಏನಾಯಿತು' ಪತ್ರಕರ್ತೆಯೊಬ್ಬರು ಕೇಳಿಯೇಬಿಟ್ಟರು. ಇನ್ನೂ ಇಬ್ಬರು ಪುರುಷರು ಎದುರಲ್ಲಿ ಇದ್ದುದರಿಂದ ನಟಿ ಸ್ವಲ್ಪ ಮುಜುಗರಕ್ಕೆ ಒಳಗಾದಂತೆ ಕಂಡರು. 'ಎರಡು ನಿಮಿಷ ಬಂದೆ' ಎಂದು ನಟಿ ಎಲ್ಲಿಗೋ ಹೋದರು. ಮರಳಿದಾಗ ಮಚ್ಚೆ ಕಂಡಿತು. ಪತ್ರಕರ್ತೆ ತುಂಟ ನಗೆ ನಕ್ಕರು. ನಟಿಯದ್ದು ಅದೇ ಗಂಭೀರ ವದನ. ಮಚ್ಚೆಯನ್ನೇನೂ ಸರ್ಜರಿ ಮಾಡಿಸಿಲ್ಲ ಎಂದು ರುಜುವಾತು ಮಾಡಲು ಅವರು ಮುಖ ತೊಳೆದುಕೊಂಡು ಬಂದಿದ್ದರಷ್ಟೆ.

ಈ ನಟಿ ದಿಟ್ಟೆ. ಮಲ್ಲೇಶ್ವರದ ಮೈದಾನದಲ್ಲಿ ಮೊದಲ ಸಿನಿಮಾ ಮುಹೂರ್ತ ನಡೆದಾಗ ದೊಡ್ಡ ಗುಂಪು. ಅದರಲ್ಲಿ ಎದ್ದುಕಾಣುತ್ತಿದ್ದುದು ಹುಡುಗಿಯ ಅದೇ ಮಚ್ಚೆ. ಆ ಸಿನಿಮಾ ಚಿತ್ರೀಕರಣ ಮುಗಿದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳೆಲ್ಲಾ ಕೊನೆಗೊಳ್ಳುವ ಮೊದಲೇ ಅದರ ನಿರ್ಮಾಪಕರು ಕೊನೆಯುಸಿರೆಳೆದರು. ಆದ್ದರಿಂದ ಆ ಸಿನಿಮಾ ತೆರೆಕಾಣುವುದಕ್ಕೂ ಮೊದಲೇ ನಟಿಯ ಬೆರಳೆಣಿಕೆಯ ಸಿನಿಮಾಗಳು ಬಿಡುಗಡೆಯಾದವು.

ಹರಿಶ್ಚಂದ್ರ ಘಾಟ್‌ಗೆ ಸಮೀಪದ ಬಡಾವಣೆಯಲ್ಲಿದ್ದ ಹುಡುಗಿ ಧಾರಾವಾಹಿಯಲ್ಲಿ ಛಾಪು ಮೂಡಿಸಿದವರು. ಸಿನಿಮಾ ಜಗತ್ತಿಗೆ ಕಾಲಿಟ್ಟು, ಸೈ ಎನಿಸಿಕೊಳ್ಳಲು ಹೆಚ್ಚು ಕಾಲವೇನೂ ಬೇಕಾಗಲಿಲ್ಲ. ನಟೀಮಣಿಯರ ಕಥಾನಕದ ಸಿನಿಮಾವೊಂದನ್ನು ನಿರ್ದೇಶಕರು ತಯಾರಿಸಿದಾಗ, ಗುಂಗುರು ಕೂದಲು ಮಾಡಿಕೊಂಡು ಬಣ್ಣ ಹಚ್ಚಿದ ಈ ಮಚ್ಚೆ ನಾಯಕಿಗೆ ಅಭಿನಯಕ್ಕಾಗಿ ಶಹಬ್ಬಾಸ್‌ಗಿರಿ ಸಿಕ್ಕಿತು. ಫಿಲ್ಮ್‌ಫೇರ್ ಸೇರಿದಂತೆ ಹಲವು ಪ್ರಶಸ್ತಿಗಳೂ ಹುಡುಕಿಕೊಂಡು ಬಂದವು.

ಸಿನಿಮಾಗಳ ಆಯ್ಕೆಯಲ್ಲಿ ನಟಿ ತುಂಬಾ ಚೂಸಿ. ತನ್ನ ಪಾತ್ರದ ಹರವು ಎಷ್ಟು ಎಂದು ಅಂದಾಜು ಮಾಡುವುದರಲ್ಲಿ ಎತ್ತಿದಕೈ. ಟೆಸ್ಟ್ ಕ್ರಿಕೆಟ್‌ನಲ್ಲಿ ರಾಹುಲ್ ದ್ರಾವಿಡ್ ಅವರಿಗಿರುವಂಥ ಸ್ಥಿರತೆ ಸಿನಿಮಾ ಆಯ್ಕೆಯ ವಿಷಯದಲ್ಲಿ ಇವರಿಗಿದೆ. ಏಕಕಾಲದಲ್ಲಿ ಹಲವು ಸಿನಿಮಾಗಳಿಗೆ ಸಹಿ ಹಾಕಿ, ಚಿತ್ರೀಕರಣದ ದಿನಾಂಕ ಹೊಂದಾಣಿಕೆಯ ಉಸಾಬರಿಗೆ ಎಂದೂ ಸಿಲುಕಿದವರಲ್ಲ. 'ಕೃಷ್ಣನ ಪ್ರೇಮಕಥಾನಕ'ದ ಸಿನಿಮಾದಲ್ಲಿ ನಾಯಕಿಯಾಗಿ ಅಭಿನಯಿಸಿದಾಗ, ನಿರ್ದೇಶಕರು ಇವರಿಂದ ಡಬ್ ಮಾಡಿಸಲಿಲ್ಲ. ತೂಕದ ಪಾತ್ರ ಅದಾಗಿದ್ದು, ಅಭಿನಯ ಕಂಡು ಅನೇಕರು ನಿಬ್ಬೆರಗಾದರು. ಆದರೆ, ಡಬ್ಬಿಂಗ್ ತಾನು ಮಾಡದೇ ಹೋದದ್ದರಿಂದ ಪ್ರಶಸ್ತಿ ಮರೀಚಿಕೆ ಎನ್ನುವುದು ಮೊದಲೇ ನಟಿಗೆ ಗೊತ್ತಿತ್ತು.

ಅಂಥ ಸಣ್ಣ ಪುಟ್ಟ, ದೊಡ್ಡ ಬೇಸರಗಳನ್ನು ಕಣ್ಣೊರೆಸಿಕೊಂಡು ಬಲು ಬೇಗ ಮರೆಯುವ ಜಾಯಮಾನದ ನಟಿ ಇವರು. ತಾನು ಮದುವೆಯಾಗುವ ಹುಡುಗ ಹೇಗಿರಬೇಕು ಎಂದು ಟೀವಿ ಕಾರ್ಯಕ್ರಮವೊಂದರಲ್ಲಿ ಚಿತ್ರ ಬಿಡಿಸಿ ಅಭಿವ್ಯಕ್ತಿಸಿದ ದಿಟ್ಟೆ. ಆ ಚಿತ್ರದಲ್ಲೇ ತಾನು ಯಾರ ಪ್ರೇಮಿ ಎನ್ನುವುದನ್ನು ಜಾಹೀರುಗೊಳಿಸಿದ ನಟಿಯದ್ದು ಮೊದಲಿನಿಂದಲೂ ಸುಸ್ಪಷ್ಟ ನುಡಿ. ಮನಕ್ಕೆ ಹಿಡಿಸಿದ್ದನ್ನೇ ಮಾಡುವುದು ಚಿಕ್ಕಂದಿನಿಂದಲೂ ಬಂದಿದೆ.

ಮದುವೆ ಯಾವಾಗ ಎಂದು ಈಗ ಅವರನ್ನು ಅನೇಕರು ಕೇಳುವುದುಂಟು. ಅದಕ್ಕೆ ಅವರ ಜೊತೆಗೆ ಕೆನ್ನೆ ಮೇಲಿನ ಮಚ್ಚೆಯೂ ನಗುತ್ತದಷ್ಟೆ. ಜಾಣ ನಟಿಯ ಮಂದಹಾಸದಲ್ಲೂ ಗುಟ್ಟು ತಣ್ಣಗೆ ತುಳುಕುತ್ತದೆ.

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68